**ದಿಃ21-01-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಲ್.ಕೆ.ಎಸ್. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 146/2024 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ಶವ ಪಂಚನಾಮೆ, ಶವ ಪರೀಕ್ಷಾ ವರದಿ, ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 6 ಎಂದು ಗುರುತಿಸಲಾಯಿತು. ನನ್ನ ಮೃತ ಮಗನಿಗೆ ಸಂಬಂಧಿಸಿದ ಆಧಾರ್ ಕಾರ್ಡ್‌ನ್ನು ಹಾಜರುಪಡಿಸಿದ್ದು ನಿಪಿ.7 ಎಂದು ಗುರುತಿಸಲಾಯಿತು. ನನ್ನ ಪತಿಯ ಹೆಸರಿನಲ್ಲಿ ಜಾನುಕಲ್ಲು ಗ್ರಾಮದಲ್ಲಿ ಜಮೀನು ಇರುವ ಬಗ್ಗೆ ಪಹಣಿಯನ್ನು ಹಾಜರುಪಡಿಸಿದ್ದು ನಿಪಿ.8 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದ**

2. ನನ್ನ ಮೃತ ಮಗ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದನು. ನನಗೆ ಓರ್ವ ಮಗ ಮತ್ತು ಓರ್ವ ಮಗಳು ಇದ್ದು, ಮಗ ಮೃತಪಟ್ಟಿರುತ್ತಾನೆ. ನನ್ನ ಮಗಳು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದು, ಮನೆಯಲ್ಲಿಯೇ ಇದ್ದಾಳೆ. ನನ್ನ ಮಗಳ ವಿವಾಹ ಆಗಿಲ್ಲ. ನನ್ನ ಪತಿಯ ಹೆಸರಿನಲ್ಲಿ 1 ಎಕರೆ ಖುಷ್ಕಿ ಜಮೀನು ಇದೆ. ಸದರಿ ಜಮೀನು ಮಳೆಯ ಆಶ್ರಯಿತ ಜಮೀನು ಎಂದರೆ ಸರಿ. ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್. ಪಡಿತರ ಚೀಟಿಯನ್ನು ನೀಡಿದ್ದಾರೆ. ನಮ್ಮ ಕುಟುಂಬಕ್ಕೆ ಇರುವ ಪಡಿತರ ಚೀಟಿಯಲ್ಲಿ 4 ಜನರ ಹೆಸರು ಇದೆ.

3. ಅಪಘಾತದ ಸಮಯದಲ್ಲಿ ನಾನು ಮನೆಯಲ್ಲಿಯೇ ಇದ್ದೆನು. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತದ ಕುರಿತು ಬೇರೆಯವರು ದೂರವಾಣಿ ಮೂಲಕ ತಿಳಿಸಿರುತ್ತಾರೆ. ಅಪಘಾತದ ವಿಚಾರ ತಿಳಿದ ನಂತರ ನಾನು ಮತ್ತು ನನ್ನ ಪತಿ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಗೆ ಬಂದಿರುತ್ತೇವೆ. ಹೊಳಲ್ಕೆರೆಯ ಆಸ್ಪತ್ರೆಯಲ್ಲಿ ಎರಡು ಗಂಟೆಗಳ ಕಾಲ ಇದ್ದು, ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನ್ನ ಮಗ ಬೈಕಿನಲ್ಲಿ ಬರುತ್ತಿದ್ದಾಗ ಓಮಿನಿ ವಾಹನದ ಚಾಲಕನು ಬಂದು ಅಪಘಾತ ಮಾಡಿರುತ್ತಾನೆ. ಬೈಕನ್ನು ನನ್ನ ಮೃತ ಮಗನೆ ಚಾಲನೆ

ಮಾಡುತ್ತಿದ್ದನು. ಸದರಿ ಬೈಕು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ನನ್ನ ಮಗನ ತಲೆಗೆ ಪೆಟ್ಟಾಗಿತ್ತು. ಬೈಕಿನಲ್ಲಿ ಮೂರು ಜನ ಹೋಗುತ್ತಿದ್ದರು. ಅಪಘಾತದಲ್ಲಿ ನನ್ನ ಮಗ ಮೃತಪಟ್ಟಿದ್ದು, ಮತ್ತಿಬ್ಬರು ಜೀವಂತ ಇದ್ದಾರೆ. ಇತರೆ ಇಬ್ಬರಿಗೆ ಗಾಯಗಳಾಗಿರುತ್ತವೆ. ಅವರ ಪೈಕಿ ಒಬ್ಬರ ಹೆಸರು ವಿಶ್ವನಾಥ ಆಗಿದ್ದು, ಮತ್ತೊಬ್ಬರ ಹೆಸರು ಗೊತ್ತಿಲ್ಲ. ಅವರ ಊರು ಗಟ್ಟಿ ಹೊಸಹಳ್ಳಿ ಗ್ರಾಮ. ನನ್ನ ಮಗನನ್ನು ಮಾತ್ರ ಚಿತ್ರದುರ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಇತರೆ ಇಬ್ಬರು ಹೊಳಲ್ಕೆರೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದಿರುತ್ತಾರೆ. ಬೈಕಿನಲ್ಲಿ ಹೋಗುತ್ತಿದ್ದ ಮೂರು ಜನ ವಯಸ್ಕರಾಗಿರುತ್ತಾರೆ. ನನ್ನ ಮೃತ ಮಗ ಬಸವೇಶ್ವರ ಆಸ್ಪತ್ರೆಯಲ್ಲಿ ಅಪಘಾತದ ಮರುದಿನ ಮೃತಪಟ್ಟಿರುತ್ತಾನೆ. ವೈದ್ಯಕೀಯ ವೆಚ್ಚಕ್ಕಾಗಿ ರೂ.2 ಲಕ್ಷ ವ್ಯಹಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ಮೃತ ಮಗನ ಅಂತ್ಯಸಂಸ್ಕಾರಕ್ಕಾಗಿ ರೂ.2 ಲಕ್ಷ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ವ್ಯವಸಾಯದಿಂದ ಮಾಸಿಕ ರೂ.50000/- ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ.

4. ನನ್ನ ತಾಯಿಯ ಹೆಸರಿನಲ್ಲಿರುವ ಬೈಕಿಗೆ ವಿಮೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮಗನ ಜನ್ಮ ದಿನಾಂಕ ಗೊತ್ತಿಲ್ಲ. ನನ್ನ ಮಗ ಜಾನಕಲ್ಲಿನ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದು, ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮಗ ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸಂಬಂಧಿಸಿದ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ನನ್ನ ಮಗ ಮತ್ತು ಇತರೆ ಇಬ್ಬರು ಹೆಲ್ಮೆಟ್‌ನ್ನು ಧರಿಸಿರಲಿಲ್ಲ ಎಂದರೆ ಸರಿ. ನನ್ನ ಮಗನ ತಲೆಗೆ ತೀವ್ರ ಪೆಟ್ಟು ಬಿದ್ದು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಮಗ ಹೆಲ್ಮೆಟ್ ಧರಿಸಿದ್ದರೆ ಮೃತಪಡುತ್ತಿರಲಿಲ್ಲ ಎಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಓಮಿನಿ ಡಿಕ್ಕಿಪಡಿಸಿ ಅಪಘಾತ ಆಗಿದ್ದು, ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಅಪಘಾತ ನನ್ನ ಮೃತ ಮಗನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ